<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>

ಸಿ.ಸಿ. ನಂ. 14920-2015

ಸಿಡಬ್ಲೂ - 12ಪಿಡಬ್ಲೂ-2

| | |
|---|---|
| ಸಾಕ್ಷಿದಾರರ ಹೆಸರು | : ಮೋಹನ ಕುಮಾರ |
| ತಂದೆಯ ಹೆಸರು | : ಕೆಂಪರಾಮಯ್ಯ |
| ವಯಸ್ಸು | : 48 ವರ್ಷ |
| ಕೆಲಸ | : ಎ ಎಸ್ ಐ, ಸದಾಶಿವನಗರ ಪೊ.ಠಾ |
| ವಾಸ | : ಬೆಂಗಳೂರು |

<u>ಸಾಕ್ಷಿಯನ್ನು ದಿನಾಂಕಃ 28-02-2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>

<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ನಾನು 2009 ರಿಂದ 2015 ರವರೆಗೆ ಹೈಗ್ರೌಂಡ್ಸ ಪೊಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 13-01-2015 ರಂದು ಚಾಸಾ 14 ರವರು ಈ ಪ್ರಕರಣದ ಆರೋಪಿ ಪತ್ತೆಗಾಗಿ ನೇಮಿಸಿದ ಮೇರೆಗೆ ನಾನು ಮತ್ತು ಚಾಸಾ 11 ರವರು ಬಾತ್ಮಿದಾರರೊಂದಿಗೆ ಕೃಷ್ಣಾ ವಿಹಾರ ಗೇಟ್ ಬಳಿ ನಾನು ಮತ್ತು ಚಾಸಾ 11 ರವರು ಬೇಟಿ ನೀಡಿ ಎ ಕೆ ಆಂಡ್ಸ ಸನ್ಸ ಉಳಿದುಕೊಂಡಿದ್ದ ಕೊಠಡಿಯ ಬಳಿ ಹೋಗಿ ಬಾತ್ಮಿದಾರರು ತೋರಿಸಿದ ಆಸಾಮಿಗಳನ್ನು ನಮ್ಮ ಜೊತೆಯಲ್ಲಿ ಕರೆದುಕೊಂಡು ಹೊಯ್ಸಳ 5ರ ಮೂಲಕ ಚಾಸಾ 14 ರವರ ಮುಂದೆ ವರದಿ ನೀಡಿ ಹಾಜರುಪಡಿಸಿರುತ್ತೇವೆ. ಸಾಕ್ಷಿಯು 2 ಮತ್ತು 4 ನೇ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಉಳಿದ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ತನ್ನ ವರದಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ. 1 ಎಂದು ಸಾಕ್ಷಿಯ ಸಹಿಯನ್ನು ನಿಪಿ. 1 ಎ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ</u>

ಠಾಣಾಧಿಕಾರಿ ಲಿಖಿತವಾಗಿ ಆದೇಶ ಮಾಡಿಲ್ಲ. ಆ ಕಟ್ಟಡದ ಸಿಬ್ಬಂದಿಯ ಸಹಿಗಳನ್ನು ದಾಖಲೆಗೆ ಪಡೆದಿಲ್ಲ. ಆರೋಪಿಗಳನ್ನು ದಸ್ತಗಿರಿ ಮಾಡುವ ಮೊದಲು ನೋಟೀಸನ್ನು ಕೊಟ್ಟಿಲ್ಲ. ನಾನು 2 ಮತ್ತು 4 ನೇ ಆರೋಪಿಗಳನ್ನು ದಸ್ತಗಿರಿ ಮಾಡಿಲ್ಲ

ಮತ್ತು ಯಾವುದೇ ಬಾತ್ಮಿಯನ್ನು ಸಂಗ್ರಹಿಸಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕಿ-ಅಂಶಕೋಸ್ಕರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ